# ಕರ್ನಾಟಕ ವಿಧಾನ ಪರಿಷತ್ತು

ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1217
ಸದಸ್ಯರ ಹೆಸರು : ಶ್ರೀ ಎಸ್.ವ್ಹಿ. ಸಂಕನೂರ (ಪದವೀಧರರ ಕ್ಷೇತ್ರ)
ಉತ್ತರಿಸುವ ದಿನಾಂಕ : 19-12-2024
ಉತ್ತರಿಸುವ ಸಚಿವರು : ಮಾನ್ಯ ಉಪ ಮುಖ್ಯಮಂತ್ರಿ

| ಕ್ರ. ಸಂ. | ಪ್ರಶ್ನೆ | ಉತ್ತರ |
|---|---|---|
| (ಅ) | ನೀರಾವರಿ ಇಲಾಖೆಯ 2022ರ ಎಸ್.ಡಿ.ಎ., ಬ್ಯಾಕ್ ಲಾಗ್ ನೇಮಕಾತಿ ಪ್ರಕ್ರಿಯೆಯಲ್ಲಿ ಅಭ್ಯರ್ಥಿಗಳು ನಕಲಿ ಅಂಕಪಟ್ಟಿ ಇತ್ಯಾದಿ ದಾಖಲೆಗಳನ್ನು ಸಲ್ಲಿಸಿದ್ದು ನಿಜವೇ; ಈ ವಿಷಯದ ಕುರಿತು ಯಾರಿಂದ ದೂರುಗಳು ಇಲಾಖೆಗೆ ಬಂದಿರುತ್ತವೆ;(ವಿವರವಾದ ಮಾಹಿತಿ ನೀಡಿ) | ನಿಜ<br><br>ಈ ವಿಷಯದ ಕುರಿತು ಇಲಾಖೆಯಲ್ಲಿ ಯಾವುದೇ ದೂರುಗಳು ಸ್ವೀಕೃತವಾಗಿರುವುದಿಲ್ಲ.<br><br>ಎಸ್.ಡಿ.ಎ., ಬ್ಯಾಕ್ ಲಾಗ್ ನೇಮಕಾತಿ ಪ್ರಕ್ರಿಯೆಯಲ್ಲಿ ದಾಖಲಾತಿ ಪರಿಶೀಲನೆ ನಡೆಸುವ ಸಂದರ್ಭದಲ್ಲಿ ಎಸ್.ಎಸ್.ಎಲ್.ಸಿ ಯಲ್ಲಿ ಅಭ್ಯರ್ಥಿಗಳು ಪಡೆದ ಅಂಕಗಳಿಗೂ ಹಾಗೂ ದ್ವಿತೀಯ ಪಿಯುಸಿ ಮತ್ತು ಸಿಬಿಎಸ್‌ಇ ಯ 12ನೇಯ ತರಗತಿಯಲ್ಲಿ ಅದೇ ಅಭ್ಯರ್ಥಿಗಳು ಗಳಿಸಿದ ಅಂಕಗಳಿಗೂ ಭಾರಿ ವ್ಯತ್ಯಾಸವಿರುವುದನ್ನು ಗಮನಿಸಿ ಸಂಬಂಧಪಟ್ಟ ಮಂಡಳಿ/ ಸಂಸ್ಥೆಗಳಿಗೆ ಅಂಕಪಟ್ಟಿಗಳು/ ಪ್ರಮಾಣ ಪತ್ರಗಳನ್ನು ನೈಜತೆಯ ಪರಿಶೀಲನೆಗಾಗಿ ಕಳುಹಿಸಿಕೊಡಲು ಹಾಗೂ ನೈಜತೆಯ ಬಗ್ಗೆ ಅಭಿಪ್ರಾಯ ಪಡೆಯಬೇಕೆಂದು ತೀರ್ಮಾನಿಸಿ, ಅಂಕಪಟ್ಟಿಗಳು/ ಪ್ರಮಾಣ ಪತ್ರಗಳನ್ನು ನೈಜತೆಯ ಪರಿಶೀಲನೆಗಾಗಿ ಸಂಬಂಧಪಟ್ಟ ಮಂಡಳಿ/ ಸಂಸ್ಥೆಗಳಿಗೆ ಕಳುಹಿಸಿ, ದಾಖಲೆಗಳ ನೈಜತೆಯ ಬಗ್ಗೆ ವರದಿಯನ್ನು ಪಡೆದ ಸಂದರ್ಭದಲ್ಲಿ ನಕಲಿ ಅಂಕ ಪಟ್ಟಿಗಳನ್ನು ಸಲ್ಲಿಸಿರುವುದು ಕಂಡು ಬಂದಿರುತ್ತದೆ. |
| (ಆ) | ಅಂಕಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲಿಸಿ ಮಾಡುವ ಸಂದರ್ಭದಲ್ಲಿ ಎಷ್ಟು ಅಭ್ಯರ್ಥಿಗಳು ನಕಲಿ ದಾಖಲೆಗಳನ್ನು ಸಲ್ಲಿಸಿರುವ ಬಗ್ಗೆ ತನಿಖೆಯಿಂದ ಹೊರ ಬಿದ್ದಿವೆ; ಮತ್ತು ಅಂತಹವರ ಮೇಲೆ ಏನು ಕ್ರಮ ಕೈಗೊಳ್ಳಲಾಗಿದೆ; | ಅಂಕಪಟ್ಟಿ ಹಾಗೂ ಇತರೆ ದಾಖಲೆಗಳನ್ನು ಪರಿಶೀಲನೆ ಮಾಡುವ ಸಂದರ್ಭದಲ್ಲಿ ಒಟ್ಟು 99 ಅಭ್ಯರ್ಥಿಗಳು ನಕಲಿ ಅಂಕಪಟ್ಟಿಗಳನ್ನು ಸಲ್ಲಿಸಿರುವುದು ಕಂಡು ಬಂದಿದೆ.<br><br>62 ನಕಲಿ ಅಂಕಪಟ್ಟಿಗಳನ್ನು ಸಲ್ಲಿಸಿರುವವರ ವಿರುದ್ಧ ಶೇಷಾದ್ರಿಪುರಂ ಪೊಲೀಸ್ ಠಾಣೆ, ಬೆಂಗಳೂರು ಇಲ್ಲಿ ದಿನಾಂಕ:28.07.2023ರಂದು ದೂರು ನೀಡಲಾಗಿದೆ.<br><br>ಸದರಿ ಪ್ರಕರಣದ ಹೆಚ್ಚಿನ ತನಿಖೆಗಾಗಿ ಪೊಲೀಸ್ ಇನ್ಸ್‌ಪೆಕ್ಟರ್, ವಿಶೇಷ ವಿಚಾರಣಾ ದಳ, ಸಿಸಿಬಿ, ಬೆಂಗಳೂರು ಇವರಿಗೆ ವರ್ಗಾವಣೆಯಾಗಿದ್ದು, ಪ್ರಸ್ತುತ ಪ್ರಕರಣವು ತನಿಖಾ ಹಂತದಲ್ಲಿರುತ್ತದೆ.<br><br>36 ನಕಲಿ ಅಂಕಪಟ್ಟಿಗಳನ್ನು ನಿರ್ದೇಶಕರು, ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಆಯುಕ್ತಾಲಯ, ರಾಜ್ಯ ವೃತ್ತಿ ಶಿಕ್ಷಣ ಪರಿಷತ್ ಇವರು ಮುಟ್ಟುಗೋಲು ಹಾಕಿಕೊಂಡಿದ್ದು, ಸದರಿ ಕಚೇರಿ ಹಂತದಲ್ಲಿಯೇ ಕಾನೂನು ಕ್ರಮ ಕೈಗೊಂಡು, ಕೈಗೊಂಡ ಕ್ರಮದ ಬಗ್ಗೆ ವರದಿ ನೀಡುವಂತೆ ಕೋರಲಾಗಿದೆ. |

| | | |
|---|---|---|
| | | ಇನ್ನುಳಿದ ಒಬ್ಬ ಅಭ್ಯರ್ಥಿಯು ಸಲ್ಲಿಸಿದ್ದ State Board of School Examination & Board of Higher Secondary Examinations, Tamil Nadu, ಅಂಕಪಟ್ಟಿಯು ನೈಜವಲ್ಲವೆಂದು ವರದಿ ಸ್ವೀಕೃತವಾಗಿದ್ದು, ಆ ಕುರಿತು ಕ್ರಮವಹಿಸಲಾಗುತ್ತಿದೆ. |
| (ಇ) | ಈ ಪ್ರಕರಣದಲ್ಲಿ ಸಿ.ಸಿ.ಬಿ., ರವರು ನಕಲಿ ಅಂಕಪಟ್ಟಿ ಸೃಷ್ಟಿ ಮಾಡಿರುವ ತಂಡವನ್ನು ಗುರುತಿಸಿದ್ದಾರೆಯೇ; (ವಿವರವಾದ ಮಾಹಿತಿ ನೀಡಿ) | ಪೊಲೀಸ್ ಇನ್ಸ್‌ಪೆಕ್ಟರ್, ವಿಶೇಷ ವಿಚಾರಣಾ ದಳ, ಸಿಸಿಬಿ ಬೆಂಗಳೂರು ಇವರು ಸೃಷ್ಟಿತ ಅಂಕಪಟ್ಟಿಗಳನ್ನು ನೀಡಿರುವ ಹಾಸನ ಜಿಲ್ಲೆಯ ಒಟ್ಟು 12 ಅಭ್ಯರ್ಥಿಗಳನ್ನು ವಿಚಾರಣೆಗೊಳಪಡಿಸಿದಾಗ, ಜಲಸಂಪನ್ಮೂಲ ಇಲಾಖೆಯ ಶ್ರೀ ಪ್ರದೀಪ ಜಿ. ಕೆ. ದ್ವಿತೀಯ ದರ್ಜೆ ಸಹಾಯಕ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಕಛೇರಿ, ಕೇಂದ್ರ ಯಾಂತ್ರಿಕ ಉಪ ವಿಭಾಗ, ಗೊರೂರು ಇವರು ಈ ಪ್ರಕರಣದಲ್ಲಿ ಮಧ್ಯವರ್ತಿಯಾಗಿ ಭಾಗಿಯಾಗಿದ್ದು, ಇವರನ್ನು ದಸ್ತಗಿರಿ ಮಾಡಲಾದ ಹಿನ್ನಲೆಯಲ್ಲಿ ಸದರಿಯವರನ್ನು ಆದೇಶ ಸಂಖ್ಯೆ: ಜಸಅ/34/ಇಎಸ್ಎಂ/ದ್ವಿದಸ/ಕ್ರಂ.ದ./ಅಮಾನತ್ತು/2024, ದಿನಾಂಕ: 20.07.2024 ರಲ್ಲಿ ಅಮಾನತ್ತು ಮಾಡಿ ಆದೇಶಿಸಲಾಗಿದೆ. |
| (ಈ) | ನೇಮಕಾತಿ ಕುರಿತು ನಡೆದಿರುವ ವಿವಿಧ ವಿಚಾರಣೆಗಳು ಯಾವ ಅವಧಿಯಲ್ಲಿ ಪೂರ್ಣಗೊಳ್ಳುತ್ತವೆ ಮತ್ತು ಅಭ್ಯರ್ಥಿಗಳಿಗೆ ಯಾವಾಗ ನ್ಯಾಯ ಒದಗಿಸಲಾಗುವುದು? | ಪೊಲೀಸ್ ಇನ್ಸ್‌ಪೆಕ್ಟರ್, ವಿಶೇಷ ವಿಚಾರಣಾ ದಳ, ಸಿಸಿಬಿ ಬೆಂಗಳೂರು ಇವರಿಂದ ತನಿಖಾ ವರದಿ ಸ್ವೀಕೃತವಾದ ನಂತರ ಪರಿಶೀಲಿಸಿ ಕ್ರಮ ಕೈಗೊಳ್ಳಲಾಗುವುದು.<br><br>ಸುಳ್ಳು ಪ್ರಮಾಣ ಪತ್ರ ನೀಡಿರುವ ಅಭ್ಯರ್ಥಿಗಳ ಹೆಸರನ್ನು ಕೈಬಿಟ್ಟು, ನೈಜತಾ ವರದಿ ಸ್ವೀಕೃತವಾದ 119 ಅಭ್ಯರ್ಥಿಗಳ ಆಯ್ಕೆ ಪಟ್ಟಿ- 1 ಅನ್ನು ದಿನಾಂಕ: 09-10-2024 ರಂದು ಬಿಡುಗಡೆ ಮಾಡಲಾಗಿದೆ. ಸದರಿ ಅಭ್ಯರ್ಥಿಗಳ ಜಾತಿ ಪ್ರಮಾಣ ಪತ್ರದ ಸಿಂಧುತ್ವ, ಪೊಲೀಸ್ ಪರಿಶೀಲನಾ ವರದಿ ಹಾಗೂ ವೈದ್ಯಕೀಯ ಪರೀಕ್ಷೆಯ ಪರಿಶೀಲನೆ ಪ್ರಕ್ರಿಯೆಯು ಪ್ರಗತಿಯಲ್ಲಿರುತ್ತದೆ. ಸದರಿ ವಿವರಗಳು ಲಭ್ಯವಾದ ನಂತರ ನೇಮಕಾತಿ ಆದೇಶ ನೀಡಲು ಕ್ರಮ ವಹಿಸಲಾಗುವುದು. |

ಸಂಖ್ಯೆ:ಜಸಂಇ 272 ಸೇಇಸಿ 2024

(ಡಿ.ಕೆ. ಶಿವಕುಮಾರ್)
ಉಪ ಮುಖ್ಯಮಂತ್ರಿ